ರುಂಡ ಉಳ್ಸಿದ್ರ ನಮ್ಮಪ್ಪಗಾ ಹುಟ್ಟಿಲ್ಲ ನಾ' ಮಳಿಗಾಲ ಮುಂದಾಯ್ತು ಮನೀ ಸೋರಿಗಿರಿತು ಅಂತೇಳಿ ಜಂತಿ, ನ್ಯಾಗೊಂದಿ ಸುದ್ ಮಾಡ್ಕೊಂಡು ಹೆಂಡಿ ಗ್ವಾಡಿಗೆ ಶಗಣಿ ಬಳದು ಸುಣ್ಣ ಸಾರಸ್ತಿದ್ದ ಪಡಿಯಾ ಮತ್ತ ಅವರವ್ವ ಮಲಕಾಜವ್ವ ಬಾಯಿ ಕೇಳುತ್ಲೇ ಹೊರಗಬಂದ್ರು. ಅಷ್ಟೊತ್ತಿಗೆ ಕೇರೆನ ಮಂದಿನೂ ಸೇರಿ 'ಇದಾ ಹುಡುಗ ಮಬ್ಬುಸೇನಿ ಇದ್ದಂಗೈತಿ ಬಿಡವಾ,. ಇದಕ್ಯಾಕ ಬೇಕಿತ್ತು ಊರಉಸಾಬರಿ' ಅಂತನೂ ಮಾತಾಡ್ತಿತ್ತು. ಪರಸ್ಥಿತಿ ಅರ್ಥ ಮಾಡ್ಕೊಂಡ ಮಲಕಾಜವ್ವ ಸೀದಾ ಹೋದವ್ಳ ಕಾಲಿಗ್ ಬಿದ್ದು 'ಹರೇದ ಹುಡುಗ ಗೊತ್ತಾಗಲ್ದ ತಪ್ ಮಾಡ್ಯಾನ ಹೊಟ್ಯಾಗಾಕ್ಕೋರಿ ಸಾವ್ಕಾರ್ರ' ಮಲಕಾಜವ್ವ ಸಾವ್ಕಾರ ಹೆಜ್ಜಿ ಕಿತ್ತಿಡದಂಗ ಗಚ್ಚಿಗ ಕಾಲು ಬಿಕ್ಕೊಂಡು ನೆಲಕ್ ಕೂತ್ಲು. ಆತನ ಕೈಯ್ಯಾಗಿನ ಕೊಡ್ಲಿ ಹೀರ್‍ಯಾಡ್ತಿತ್ತು. ಹೊಸಲಿ ಮುಂದ ನಿಂತಿದ್ದ ಪಡಿಯಾ ನಿಂತಲ್ಲೇ ಉಚ್ಚೀ ಒಯ್ಕೊಂಡಿದ್ದ. ಎಡಗಾಲು ಕೊಸರಿಸಿಕೊಂಡ ಸಾವ್ಕಾರ ಜಿಟ್ಟೀಗಾಲೀಲೆ ಕಾಲಕೆಳಗೆ ಕೂತ ಮಲಕಾಜವ್ವನ ಹೆಗಲಿಗೆ ಒದ್ರ ಗಟಾರತನ ಉಳ್ಯಾಡಕೊಂತ ಹೋದ್ಲು. ಮೈಮ್ಯಾಗಿನ ಸೀರಿ ಸಾವ್ಕಾರನ ಝುರಕಿ ಜಪ್ಪಲಿಗೆ ಸುತಗೊಂಡಿದ್ಕ ಎದೀ ಮ್ಯಾಗ ಜಂಪರ್ ಅಷ್ಟ ಉಳಿದಿತ್ತು.

ಪಡಿಯಾನ ಬಿಸಿರಕ್ತ ಸುಮ್ಮನಿರಿಸಲಿಲ್ಲ. ಮಂದೆಲ್ಲ ಹೊಯ್ ಹೊಯ್ ಅನ್ನುತ್ಲೇ ಕಟ್ಟೀ ಹತ್ತಿದವನೇ ಸಾವ್ಕಾರನ ಎದೆಯತ್ತ ಜಿಗಿದು ಒದ್ದಾಬಿಟ್ಟ. ಬಿದ್ದ ಏಟಿಗೆ ಸಾವುಕಾರನೂ ಪರಸಿ ನಡುವಿನ ಗಟಾರದಾಗ ಕುಂಡಿಯೂರಿ ಗಕ್ಕನೇ ಬಿದ್ದ. ಎದಿಗೊದಿಯೋ ಹೊತ್ತಿನ್ಯಾಗ ಕಟ್ಟೀಕಲ್ಲಿಗೆ ತೆಲಿಪಟ್ಟ ಬಡಿಸ್ಕೊಂಡು ಪಡಿಯಾ ನೆಲಕ್ಕ ರಕ್ತ ಸುರಸಗೊಂತ ಬಿದ್ದು ಇನ್ನೂ ಒಂದು ಕೈ ನೋಡ್ಕೋತೀನೆಂತ ಹಾರ್‍ಯಾಡ್ತಿದ್ದ. ಓಣೆಣ್ಣೋದು ರಾಮಾರಗತಾಗಿತ್ತು. ಸಾವ್ಕಾರ ಗಟಾರದಿಂದ ಶಕ್ತಿಮೀರಿ ಎದ್ದೇಳಲು ಒದ್ದ್ಯಾಡುತ್ತಿದ್ದ. 'ಯಾರನ್ನ ತೊಡವಿ ಗೊತ್ತಿಲ್ಲೇ ನಿನಗ ಹೊಲೆಮಾದ್ಗ, ಕಾಣಸ್ತೀನಿ ನಿನಗೊಂದು ಗತಿ. ಕೇರಿಗೆ ಕೇರಿನ ಬೆಂಕಿ ಹಚ್ಚದಿದ್ರ ಸಾವ್ಕಾರ ಗುರುಶಾಂತಪ್ಪನ ಮಗನಾ ಅಲ್ಲ ನಾ' ಕೇರಿಯೊಳಗಿನ ಎಲ್ಲಾ ಮನಿಯೊಳಗೂ ದರುವು ಹಿಡಿವಂಗ ಸಾವ್ಕಾರ ಕೂತಲ್ಲಿಯೇ ಮೈಯ್ಯಾಗಿನ ಶಕ್ತಿ ಮಿಕ್ಕಿ ಚೀರ್ತಿದ್ದ. ಸಾವ್ಕಾರ ತಿನುಕ್ಯಾಡೋದು ನೋಡಕಾಗ್ದ ಗಟ್ಟುಳ ನಾಕ್ ಗಂಡಾಳು ಮುಂದ ಬಂದು ಚಕ್ಕಡ್ಯಾಗ ಹೇರಕೊಂಡು ಅವನ ಮನೆಯತ್ತ ಎಳದೊಯ್ದರು. ಸಾವ್ಕಾರನನ್ನೂ ಎದುರುಹಾಕಿಕೊಳ್ಳೋ ಧೈರ್ಯ, ಶಕ್ತಿ ಇಲ್ಲದ ಮಲಕಾಜವ್ವನ ಕಣ್ಣೊಳಗ ರಾತ್ರಿಯೆಲ್ಲ ಕಣ್ಣೀರು ನಿಲ್ಲಲಿಲ್ಲ. ಊರದೈವದ ಮಂದೆಲ್ಲ ರಾತ್ರೋರಾತ್ರಿ ಮಾತಾಡಕೊಂಡು ಪಂಚಾಯತಿ ಸೇರಿಸೋ ಮಾತು ದರವೊಂದು ದಿಕ್ಕಿಗೂ ಹರಡಿತು.

ಹರ್‍ಯಾಡಿ ಹರ್‍ಯಾಡಿ ಪ್ರಜ್ಞೆ ತಪ್ಪಿ ಬಿದ್ದಿದ್ದ ಪಡಿಯಾ ಎಚ್ಚರಾದ್ಮೇಲೆ 'ಯವ್ವಾ ಬೇ, ಸಾವ್ಕಾರ ಬಡದೆಬ್ಬಿಸಿದ ವಿಷದ ಹಾವಾಗ್ಯನ, ಸುಮ್ನ ಬಿಡೋದಿಲ್ಲ ನಮ್ನ. ಒಂದೀಟ ದಿನ ಊರುಬಿಟ್ಟು ಗೋವಾಕರ ಹೋಗೂನನು, ನಾಕು ರೊಕ್ಕಾಗ್ತವೂ, ಜೀವನೂ ಉಳಿಯುತ್ತ ಎಂದ. ಮಲಕಾಜವ್ವ ಮಗನ ಮಾತು ತಡದು 'ಹುಲಿಗೆವ್ವ ಇಟ್ಟಂಗ ಬದುಕ್ತೀವಿ, ಸತ್ರೂ ಇಲ್ಲೇ ಸಾಯೂನ ಮಗನಾ, ಮನೀ ಬಿಡೋದಂತೂ ಬ್ಯಾಡ' ಅಂದ್ಲು. 'ಆತೆವ್ವಾ ಆದ್ರ ಕೇರಿ ಮಂದಿ ಕಂಡ್ರ ಊರನವ್ರು ಯಾವಾಗ್ಲೂ ಚೀ ಥೂ ಅಂತಾರ, ಮಾತೆಲ್ಲ ಹೊಲಸ ಬೈಗುಳದಿಂದಾನ ಸುರುವಾಕ್ತಾವು, ಏಟದಿನಾಂತ ಸಾವರಿಸಿಕೊಂಡು ಹೋಗ್ಬೇಕ್ಬೇ, ಏನರ ಮಾಡ್ಬೇಕು' ಸಾವಧಾನದಿಂದ ಕೇಳಿದ. ಮಲಕಾಜವ್ವ ಇನ್ನೂ ಸಮಾಧಾನಿಸುತ್ತ 'ಮಕ್ಕೋರಪಾ ಸಾಕ್ ಈಗ ಆಗಿದ್ದ, ಬೆಳಕ ಹರಿದ್ರ ಹೋಗಿ ದೈವದ ಮುಂದ ಕೈಕಟ್ಟಿ ನಿಲ್ಲೋಣ. ಊರಾಗ ನಿಟ್ಟುಟ್ಟೇ ಬಾಳೇ ಮಾಡ್ಬೇಕಂದ್ರ ನಾಕ್ಮಂದಿ ಹಿರಿಯಾರು ಹೇಳ್ದಂಗ ಕೇಳೋನ' ಎಂದು ಸುಮ್ಮನಾಗಿಸಿದಳು.

ಮುಂಜಮುಂಜಾನೆ ಊರಮಂದಿ ಕೈಯ್ಯಾಗ ಚರಿಗಿ ಹಿಡ್ಕೊಂಡು ಹೇಲಿಕೇರಿಗೆ ಹೋಗೋದ್ಬಿಟ್ಟು ಗುಡಿಮುಂದ ನಿಂತಿತ್ತು. ಊರ ದೈವದ ಮಂದೆಲ್ಲ ಮಾತಾಡಿಕೊಂಡಂಗ ಬಸವಂದೇವರ ಗುಡಿಕಟ್ಟೀಗೆ ಕೂತಿತ್ತು. ಪಡಿಯಾ ಮತ್ತ ಮಲಕಾಜವ್ವನ್ನ ಕರಿಯಾಕ ತಳವಾರನ ಓಡಿಸಿದ್ರು. ಚಪ್ಪೀಗೆ ಹೊಡತ ಬಿದ್ದು ಎದ್ ಓಡ್ಯಾಡಾಕಾಗಲಾರ್ದ ಸಾವ್ಕಾರ ರುದ್ರಗೌಡನನ್ನ ಇಲ್ಲೂ ಚಕ್ಕಡಿ ಬಂಡ್ಯಾಗ ಕೂರಸ್ಕೊಂಡು ಎಳುಕೊಂಡು ತಂದಿದ್ರು. ಎಲ್ಲರೂ ಸೇರಿದ್ಮೇಲೆ ಮುಗಿಲ್ ಹರಿದು ಬೀಳೋವಂಗ ಮಾತುಗಳು ಸುರದ್ವು. ಕೊನಿಗೆ 'ರುದ್ರಗೌಡನದೂ ಇದರೊಳಗ ತಪ್ಪೈತಿ, ಆಗಿರೋ ಅನಾಹುತನಾ ಕುಂತದೈವದ ಮುಂದ ಇಡಲಾರ್ದ,